SRI T. S. MANI.—If the Hon'ble Minister says 'yes' to my question, I would like to ask him what is that permanent solution? Can he explain?

SRI A. LAKSHMISAGAR.—Water supply position is not satisfactory in several parts of our State including KGF. The main source-of supply has been from B thamangala tank. We did not have sufficient rains, there were some scanty rains. In the meanwhile, We have taken up several measures to meet the demands of the people, at least to the minimum possible extent. Improvment to water supply system at Robersonpet Kolar at an estimated cost of Rs. 18½ lakhs has also been considered. Water supply to KGF (BEML) has been improved by sinking and harnessing borewells in Gosinakere tank area, and sinking and harnessing borewells has been undertaken at Swarnakuppa and Oorgam areas under scarcity relief work at a cost of Rs. 6 lakhs. All these measures have been taken. If the rain God do not help us, there will be difficulty for us even all these schemes are implemented. I hope and trust that this year we will have sufficient rains and my friend Sri Mani will not have any difficulty.

SRI T. S. MANI.—KGF is a growing city and there is a proposal to upgrade it to the City Corporation. Why th Government can't supply Cauvery water to KGF? Is there any proposal to that effect?

SRI A. LAKSHMISAGAR.—Once upon a time that idea was there. But, i will be a scheme costing several crores of rupees, ie is stil in the stage of hibernation.

ಅಧ್ಯಕ್ಷರು.—ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ—೫೨ (೧೬೯)ನ್ನು ಮುಂದೂಡಲಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಮೂರು ದಿವಸಗಳಿಂದ ನನ್ನ ಪ್ರಶ್ನೆಗಳನ್ನು ಮುಂದೂಡಲಾಗಿದೆ ಎಂದು ಹೇಳುತ್ತಿದ್ದೀರಿ. ಹಾಗಾದರೆ ನನ್ನ ಪ್ರಶ್ನೆಗೆ ಉತ್ತರವು ಮುಂದಿನ ಅಧಿವೇಶನಕ್ಕೆ ಆದರೂ ಬರುತ್ತದೆಯೇ?

ಅಧ್ಯಕ್ಷರು.—ತಮಗೆ ಉತ್ತರವನ್ನು ಒದಗಿಸಿಕೊಡುತ್ತೇನೆ. ಈಗ ಮಾನ್ಯ ಯಡಿಯೂರಪ್ಪ ನವರು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರು ಸದಸ್ಯರ ಪ್ರಶ್ನೆಗಳನ್ನು ಮುಂದಕ್ಕೆ ಹಾಕಲಾಗಿದೆ ಎಂದು ಹೇಳುತ್ತಿದ್ದೀರಿ, ಆ ಪ್ರಶ್ನೆಗಳು ಏತಕ್ಕೆ ಮುಂದಕ್ಕೆ ಹೋಗುತ್ತವೆ ಎಂಬುದಕ್ಕೆ ನಮಗೆ ಕಾರಣವನ್ನು ಹೇಳಬೇಕು, ಅದು ನಮಗೆ ಗೊತ್ತಾಗಬೇಕು. ಜೊತೆಗೆ ಸದಸ್ಯರುಗಳು ಕೇಳಿದ ಪ್ರಶ್ನೆಗಳಿಗೆ ಸಂಬಂಧಪಟ್ಟ ಮುಂತ್ರಿಯವರಿಂದ ಉತ್ತರವು ಸದನದಲ್ಲಿಯೇ ಬರಬೇಕಾಗುತ್ತದೆ. ಸದನದಲ್ಲಿ ಉತ್ತರವನ್ನು ಮಂತ್ರಿಯವರು ಕೊಡುವ ಹೊತ್ತಿನಲ್ಲಿ ಸದಸ್ಯರುಗಳು ಆ ಕರಿತು ಉಪ-ಪ್ರಶ್ನೆಗಳನ್ನು ಕೇಳುವುದಕ್ಕೆ ಸಾಧ್ಯವಾಗುತ್ತದೆ. ಅಧಿವೆ ಶನ ಮುಗಿದ ಮೇಲೆ, ಅಥವಾ ಸದಸ್ಯರುಗಳಿಗೆ ನೇರವಾಗಿ ಉತ್ತರವನ್ನು ಕಳುಹಿಸಿದಲ್ಲಿ ಸದಸ್ಯರು ಉಪ-ಪ್ರಶ್ನೆಯನ್ನು ಕೇಳುವ ಹಕ್ಕು ಇಲ್ಲದಾಗುತ್ತದೆ. ಆದುದರಿಂದ ಈ ಕುರಿತಾಗಿ ಮಾನ್ಯ ಅಧ್ಯಕ್ಷರು ಸದಸ್ಯರುಗಳ ಹಕ್ಕನ್ನು ತಾವು ರಕ್ಷಣೆ ಮಾಡ ಬೇಕಾಗುತ್ತದೆ.

ಅಧ್ಯಕ್ಷರು.—ನೀವು ಹೇಳಿದ್ದನ್ನು ಅವರು ತಿಳಿದುಕೊಂಡರು.

ಶ್ರೀ ವಿ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಕೆಲವು ಪ್ರಶ್ನೆಗಳು ಹಲವಾರು ವಿವರಣೆಗಳನ್ನು ಒಳಗೊಂಡ ವಿಷಯಗಳನ್ನು ಮಾನ್ಯ ಎಸ್. ಬಂಗಾರಪ್ಪನವರು ಪ್ರಸ್ತಾಪಿಸಿರುತ್ತಾರೆ. ಆದರಲ್ಲಿ ೫೫-೧೦ ವರ್ಷಗಳ ಸಂಬಂಧಪಟ್ಟ ವಿವರಗಳನ್ನು ಕೇಳಿರುತ್ತಾರೆ. ಆದ್ದರಿಂದ ಕೆಲವೊಮ್ಮೆ ನಾವು ವಿವರ ಗಳನ್ನು ತರಿಸಿಕೊಳ್ಳಲಿಕ್ಕೆ ಸಮಯವಾಗುತ್ತದೆ. ಆದರೆ ಸದಸ್ಯರುಗಳವರ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟೇಕೊಡುತ್ತೇವೆ. ಆಡಳಿತಾತ್ಮಕವಾದ ಅನುಕೂಲತೆಗಳು ಇದ್ದರೂ ಕೂಡ ಹಲವಾರು ದೂರದ ಪ್ರದೇಶಗಳಿಂದ ವಿವರಣಾತ್ಮಕವಾದ ಉತ್ತರವು ಒಮ್ಮೊಮ್ಮೆ ಶೀಘ್ರಕಾಲದಲ್ಲಿ ಸಿಗುವುದಿಲ್ಲ. ಹೀಗಾಗಿ ಸಕಾಲದಲ್ಲಿ ಒ ದೊಂದು ಬಾರಿ ಉತ್ತರ ಸಿಗುವುದಿಲ್ಲ. ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಉತ್ತರ ವನ್ನು ಒದಗಿಸಿಕೊಡತಕ್ಕಂತಹ ಜವಾಬ್ದಾರಿಯು ಸರಕಾರಕ್ಕೆ ಇದೆ. ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ವೇದಾಂತ ಹೆಮ್ಮಿಗೆಯವರ ಪ್ರಶ್ನೆಯೂ ಮುಂದಕ್ಕೆ ಹೋಯಿತು. ಅದೇ ರೀತಿಯಲ್ಲಿ ಮಾನ್ಯ ಎಂ. ಎಸ್. ಪಾಟೀಲ್‌ರವರ ಪ್ರಶ್ನೆಯೂ ಮುಂದಕ್ಕೆ ಹೋಯಿತು. ಹಾಗೆಯೇ ಮಾನ್ಯ ಬಸವಲಿಂಗಪ್ಪನವರ ಪ್ರಶ್ನೆಯೂ ಮುಂದಕ್ಕೆ ಹೋಯಿತು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಸ್ವಲ್ಪ ತಡೆಯಿರಿ. ಶ್ರೀಮತಿ ಲೀಲಾದೇವಿಯವರ ಪ್ರಶ್ನೆ ಏನು ಎಂದರೆ.—''೧೯೮೫-೮೬ನೇ ಸಾಲಿನಲ್ಲಿ ರಾಜ್ಯದಲ್ಲಿ ಎನ್. ಆರ್. ಇ. ಪಿ. (ಬರಗಾಲ) (೨) ಎನ್. ಆರ್. ಇ. ಪಿ. (ರೆಗ್ಯೂಲರ್) (೩) ಆರ್.ಎಲ್.ಇ.ಪಿ. (೪) ಡಿ.ಪಿ.ಎ.ಪಿ. (೫) ಇತರ ಯೋಜನಾ (ಪ್ಲಾನ್) ಕಾರ್ಯಕ್ರಮಗಳಿಗೆ ಸರ್ಕಾರದವರು ಬಿಡುಗಡೆ ಮಾಡಿದ ಹಣವೆಷ್ಟು ? ಹಾಗೂ ಖರ್ಚಾದ ಹಣವೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು ?'' ಎಂದು ಇದೆ. ಅವರು ತಮ್ಮ ಪ್ರಶ್ನೆಯಲ್ಲಿ ರಾಜ್ಯದ ೧೭೫ ತಾಲ್ಲೂಕುಗಳ ವಿವರಗಳನ್ನು ಕೇಳಿದ್ದಾರೆ. ಪ್ರಶ್ನೆಯು ಬಹಳ ಮಹತ್ವ ವಾದ ಪ್ರಶ್ನೆಯಾಗಿದೆ. ಆದಕ್ಕಾಗಿ ಪ್ರತಿಯೊಂದು ತಾಲ್ಲೂಕಿನಿಂದ ವಿವರಣೆಗಳು ಬರಬೇಕಾಗುತ್ತದೆ. ಹೀಗಾಗಿ ಸ್ವಲ್ಪ ಸಮಯ ಹಿಡಿಯುತ್ತದೆ. ಸಕಾಲದಲ್ಲಿ ಉತ್ತರಗಳು ಬಂದಿಲ್ಲವಾದುದರಿಂದ ಇದನ್ನು ಮುಂದಕ್ಕೆ ಹಾಕಲಾಯಿತು. ಆದರೂ ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ವೇದಾಂತ ಹೆಮ್ಮಿಗೆಯವರ ಪ್ರಶ್ನೆ ಹೀಗೆ ಇದೆ. ''ಮೈಸೂರು ನಗರಾಭಿವೃದ್ಧಿ ಸಮಿತಿಯು ಜಯನಗರ ತೋಣಚಿಕೊಪ್ಪಲಿನಲ್ಲಿ ೮೦೭ ಮನೆಗಳನ್ನು ಮಂಜೂರು ಮಾಡಿ ಎಷ್ಟು ವರ್ಷಗಳಾಯಿತು, (ಆ) ಇದುವರೆವಿಗೆ ಮಂಜೂರಾದವರಿಗೆ ಮನೆಗಳನ್ನು ಅವರ ವಶಕ್ಕೆ ಕೊಡದಿರಲು ಕಾರಣವೇನು ? ಎಂದು ಇದೆ. ಈ ಪ್ರಶ್ನೆಗೆ ಸೂಕ್ತ ಕಾಲದಲ್ಲಿ ಉತ್ತರ ವನ್ನು ತರಿಸಿಕೊಳ್ಳಲಿಕ್ಕೆ ಆಗುವುದಿಲ್ಲವೇ ? ಮೈಸೂರು ನಗರ ಬೆಂಗಳೂರು ನಗರದಿಂದ ಎಷ್ಟು ದೂರದಲ್ಲಿ ಇದೆ ?

ಶ್ರೀ ವಿ. ಲಕ್ಷ್ಮೀಸಾಗರ್.—ಸರಕಾರಕ್ಕೆ ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಕೊಡುವ ಉತ್ತರ ಗಳನ್ನು ಒಡಿದಿಟ್ಟುಕೊಳ್ಳಬೇಕೆಂಬ ಉದ್ದೇಶ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮುಂದಕ್ಕೆ ಹಾಕಿದೆ ಎಂದರೆ, ಉತ್ತರವನ್ನು ಕಳುಹಿಸಿಕೊಡುತ್ತಾರೆ ಎಂದು ತಾವು ಹೇಳುತ್ತೀರಿ. ಸದನದಲ್ಲಿ ಉತ್ತರಿಸತಕ್ಕಂತಹ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವಂತೆ ಕನ್ವರ್ಟ್ ಮಾಡಿದರೆ, ಸದಸ್ಯರುಗಳು ಹಾಕಿದ ಪ್ರಶ್ನೆಗಳ ಮಹತ್ವವು ಹೋಗುತ್ತದೆ. ಉಪ-ಪ್ರಶ್ನೆಗಳನ್ನು ಕೇಳುವುದಕ್ಕೆ ಆಗುವುದಿಲ್ಲವಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಸಕಾಲದಲ್ಲಿ ಉತ್ತರವನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವುಗಳು ಕೊನೆಯ ಪಕ್ಷ ಸದನ ಮುಗಿಯುವುದರೊಳಗೆ ಉತ್ತರ ವನ್ನು ತರಿಸಿಕೊಡುತ್ತೇವೆ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಸಂಬಂಧಪಟ್ಟ ಕಾರ್ಯದರ್ಶಿಗಳವರಿಗೆ ಫೋನ್ ಮಾಡಿ ಉತ್ತರವನ್ನು ಕೂಡಲೇ ತರಿಸಿ ಒದಗಿಸಿ ಏರ್ಪಾಡು ಮಾಡುತ್ತೇವೆ. ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಸದಸ್ಯಗಳವರು ಹಾಕು

ವುದು ಸದನದಲ್ಲಿ ಉತ್ತರವನ್ನು ಪಡೆಯಬೇಕು ಮತ್ತು ಉಪ–ಪ್ರಶ್ನೆಗಳನ್ನು ಕೇಳಬೇಕು, ಅವುಗಳಿಗೆ ಉತ್ತರವನ್ನು ಪಡೆಯಬೇಕು ಎನ್ನುವ ಉದ್ದೇಶದಿಂದಲೇ. ಆ ಹಕ್ಕನ್ನು ನಾವು ಅವರಿಗೆ ಒದಗಿಸಿ ಕೊಡಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಉತ್ತರವನ್ನು ಒದಗಿಸಿಕೊಡುತ್ತಾರೆ.....

ಶ್ರೀ ಬಿ. ಬಸವಲಿಂಗಪ್ಪ.—ನಾನು ಕೇಳಿದ ಪ್ರಶ್ನೆಯು ಬೆಂಗಳೂರಿಗೆ ಸಂಬಂಧಪಟ್ಟಿದೆ. ಬೆಂಗಳೂರು ನಗರದಲ್ಲಿ ಗೃಹನಿರ್ಮಾಣ ಸಂಘಗಳಿಂದ ರಚಿಸಲಾಗಿರುವ ನಿವೇಶನಗಳ ಸಂಖ್ಯೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಂದ ರಚಿಸಲಾಗಿರುವ ನಿವೇಶನಗಳ ಸಂಖ್ಯೆಗಳನ್ನು ಕೇಳಿದ್ದೇನೆ. ಬಿ.ಡಿ.ಎ. ಇಲ್ಲಿಯೇ ಇದ್ದರೂ ಅವರಿಂದ ಉತ್ತರವನ್ನು ತರಿಸಿಕೊಳ್ಳಲಿಕ್ಕೆ ಆಗುವುದಿಲ್ಲವೇ ? ಹೋದ ಸಲದ ಅಧಿವೇಶದಲ್ಲಿಯೂ ಕೂಡ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ, ಅದು ಮಹತ್ವವಾದಂತಹ ಪ್ರಶ್ನೆಯಾಗಿತ್ತು, ಆದರೆ ಅದಕ್ಕೆ ಉತ್ತರವನ್ನು ಅಧಿವೇಶನ ಮುಗಿದ ಮೇಲೆ ನಮ್ಮ ಮನೆಯ ವಿಳಾಸಕ್ಕೆ ತಲುಪಿಸಿದರು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸದಸ್ಯರುಗಳು ಪ್ರಶ್ನೋತ್ತರಗಳು ಮುಗಿದ ಮೇಲೆ ಇಂತಹ ವಿಚಾರವನ್ನು ಪ್ರಸ್ತಾಪಿಸಲಿ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಪ್ರಶ್ನೆ ಇಷ್ಟೇ, ಇಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರ ದೊರಕಬೇಕು ಎಂದು ಸದನ ಮುಗಿಯುವುದರೊಳಗೆ ನಮಗೆ ಉತ್ತರವನ್ನು ಹೇಳಬೇಕು ಎಂದು...

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರು.

(INTERRUPTIONS)

ಅಧ್ಯಕ್ಷರು.—ತಾವುಗಳು ಯಾರೂ ಮಾತನಾಡಿದ್ದುದು ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಿ.

ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪದಲ್ಲಿ ಕುಡಿಯುವ ನೀರಿನ ಅಭಿವೃದ್ಧಿ ಕಾಮಗಾರಿ ಮಂಜೂರಾತಿ ಬಗ್ಗೆ

೫೩. (೨೮೮) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪದಲ್ಲಿ ಕುಡಿಯುವ ನೀರಿನ ತೊಂದರೆ ಇದ್ದು ''ಕುಡಿಯುವ ನೀರಿನ ವ್ಯವಸ್ಥೆ ಅಭಿವೃದ್ಧಿಪಡಿಸಲು'' ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದಂತೆ ಈ ಕಾಮಗಾರಿ ಕೆಲಸಕ್ಕೆ ಸರ್ಕಾರದವರು ಮಂಜೂರಾತಿ ನೀಡಲಾಗಿದೆಯೇ,

ಆ) ಈ ವರ್ಷ ಇದರ ಕೆಲಸ ಪ್ರಾರಂಭವಾಗುವುದೆ ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಕುಡಿಯುವ ನೀರಿನ ಕೊರತೆ ಇಲ್ಲ ಆದರೆ ವಿತರಣಾ ವ್ಯವಸ್ಥೆಯಲ್ಲಿ ತೊಂದರೆ ಇದ್ದು ಇದರ ನಿವಾರಣೆಗಾಗಿ ಅಂದಾಜನ್ನು ತಯಾರಿಸಲಾಗಿದ್ದು ಮಂಜೂರಾತಿ ನೀಡಬೇಕಾಗಿದೆ.

ಆ) ಪರಿಶೀಲಿಸಲಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ಶಿರಾಳಕೊಪ್ಪದಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಈಗಾಗಲೇ ೧೮ ಲಕ್ಷ ರೂಪಾಯಿಗಳ ಒಂದು ಅಂದಾಜು ತಯಾರಾಗಿ ಬಂದು, ಅದಕ್ಕೆ ಸರಕಾರದವರು ಮಂಜೂರಾತಿಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ಅಧಿವೇಶನದಲ್ಲಿ ಮಾಡಿಕೊಡುತ್ತೇವೆ ಎಂದು ಆಶ್ವಾಸನೆಯನ್ನು ತಾವುಗಳು ಕೊಟ್ಟಿದ್ದೀರಿ. ಅಲ್ಲಿ ಕುಡಿಯುವ ನೀರು ಚೆನ್ನಾಗಿ ಇದ್ದರೂ ಕೂಡ ಆದರೆ ಸರಿಯಾದ ವಿತರಣೆಗೆ ಸೂಕ್ತ ವ್ಯವಸ್ಥೆ ಇನ್ನೂ ಆಗಿಲ್ಲ. ಅಲ್ಲಿನ ಕುಡಿಯುವ ನೀರಿನ ತೊಂದರೆಯನ್ನು ಪರಿಹರಿಸುವಲ್ಲಿ ಈ ವರ್ಷವಾದರೂ ಕಾರ್ಯಕ್ರಮವನ್ನು ಹಾಕಿಕೊಂಡು ಮಾಡಿಸಿಕೊಡುತ್ತೀರಾ ಎಂದು ದಯವಮಾಡಿ ಹೇಳಬೇಕು.